# 6. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಸರಾಣಿ

## ಹಿನ್ನೆಲೆ

ಸುಮಾರು ಹತ್ತಿರ ಹತ್ತಿರ ಶತಮಾನದ ಅಂಚಿನಲ್ಲಿರುವ H.P.S ನಿಸರಾಣಿ ಶಾಲೆಯು ಸುಂದರ ಅರೆಮಲೆನಾಡು ಪ್ರದೇಶದ, ಸೊರಬ ತಾಲ್ಲೂಕಿನ ನಿಸರಾಣಿ ಗ್ರಾಮದಲ್ಲಿದ್ದು ಇಲ್ಲಿ ಸುಮಾರು 300 ಕುಟುಂಬಗಳು ವಾಸಮಾಡುತ್ತಿವೆ. ಎಲ್ಲರೂ ಬಡ ಕೂಲಿ ಕಾರ್ಮಿಕರೇ ಆಗಿರುವುದರಿಂದ ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಇಂತಹ ಊರಲ್ಲಿ ಬ್ರಿಟೀಷರ ಕಾಲದಿಂದಲೂ ತಲೆ ಎತ್ತಿನಿಂತ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಸರಾಣಿ ಎಂಬ ಹೆಗ್ಗಳಿಕೆಯೇ ಒಂದು ಹೆಮ್ಮೆ. ಈ ಊರಲ್ಲಿ ಆದಿಕಾಲದಲ್ಲಿ ರಾಣಿ ಮನೆತನದ ಒಡೆತನ ಇದ್ದಿತ್ತಾದ್ದರಿಂದ ನಿಸರಾಣಿ ಎಂಬ ಹೆಸರು ಬಂತೆಂಬ ಪ್ರತೀತಿ ಕೂಡ ಇದೆ. ಶಾಲೆಯು 93 ವರ್ಷದ ಹಳೆಕಟ್ಟಡವನ್ನೇ ಹೊಂದಿದ್ದು ಹೆಚ್ಚಿನದಾಗಿ S.S.A. ಅಡಿಯಲ್ಲಿ 2 ಕಟ್ಟಡ ನಿರ್ಮಾಣ ಮಾತ್ರ ಆಗಿರುತ್ತದೆ. 50 ಕ್ಕೂ ಹೆಚ್ಚು ಶಿಕ್ಷಕರು ಈ ಶಾಲೆಗೆ ತಮ್ಮದೇ ಆದ ಶಿಕ್ಷಣದ ಕೊಡುಗೆ ನೀಡಿ ಹೋಗಿರುತ್ತಾರೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಈ ಶಾಲೆ ವಿದ್ಯೆಯನ್ನು ನೀಡಿದ್ದು, ಪ್ರಸ್ತುತ 125 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.. ಕೇವಲ ಪಠ್ಯಪುಸ್ತಕದ ವಿಷಯಗಳಲ್ಲದೆ ಯಕ್ಷಗಾನ, ಸಂಗೀತ, ನೃತ್ಯ, ಸಾಮಾಜಿಕ ಕಳಕಳಿಯ ನಾಟಕಗಳು, ಸಾಂಸ್ಕೃತಿಕ ಚಟುವಟಿಕೆಗಳು ಇನ್ನಿತರ ಉತ್ತಮ ವಿಷಯಗಳನ್ನು ಇಲ್ಲಿ ಕಲಿಸಲಾಗುತ್ತಿದ್ದು ಇದರಿಂದ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗಿದೆ.

ಸುಮಾರು 1998 ರ ಶೈಕ್ಷಣಿಕ ವರ್ಷದ ನಂತರದಲ್ಲಿ ಬಂದ ಶ್ರೀಮತಿ ಜೋಶಿ, ಶಾರದಮ್ಮ, ಅನಿತಾ, ಶಶಿಕಲಾ ಮುಂತಾದವರಿಂದ ಕೂಡಿದ ನಮ್ಮ ಶಿಕ್ಷಕ ವೃಂದ ವಿದ್ಯಾರ್ಥಿಗಳ ಶಿಕ್ಷಣದಲ್ಲಾಗಲಿ, ಆಟೋಟಗಳಲ್ಲಾಗಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಾಗಲಿ ಹಾಗೂ ಶಾಲೆಯ ನಿರ್ವಹಣೆಯಲ್ಲೇ ಆಗಲಿ ಬೇರೆ ಯಾವ ಶಾಲೆಗೂ ಕಡಿಮೆ ಇಲ್ಲದಂತೆ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿಕೊಂಡು ಬರಲಾಗುತ್ತಿದೆ.

ಕೆಲ ಸಂದರ್ಭಗಳಲ್ಲಿ ಶಾಲೆಯ ಅಭಿವೃದ್ಧಿಗಾಗಿ ಸಮಾಜವನ್ನು ಅವಲಂಬಿಸಬೇಕಾಗಿ ಬಂದಿದ್ದು ಇದೆ. ಆದರೆ ಆಗ ದಾನಿಗಳ ಸಹಾಯ ಕೂಡ ಬಹಳ ಕಷ್ಟಸಾಧ್ಯವಾಗಿತ್ತು, ಏಕೆಂದರೆ ಸಮಾಜವನ್ನು ಎದುರಿಸಲು ಹೋದಾಗ ಸಿಗುವ ಮೊದಲ ಪ್ರಶ್ನೆ ಸರ್ಕಾರ ನಿಮಗೆ ಕೊಡುತ್ತಲ್ಲ, ಅದರಲ್ಲೇ ಅಭಿವೃದ್ಧಿಪಡಿಸಿ ಎಂದು. ಆದರೂ ನಮ್ಮ ಪ್ರಯತ್ನ ಬಿಡದೇ ಮರಳಿ ಯತ್ನವ ಮಾಡು ಎಂಬ ಗಾದೆಯಂತೆ ಆದಷ್ಟು ಎಲ್ಲರ ಮನವೊಲಿಸಲು, ಪ್ರಾರಂಭಿಸಿದ ಮೊದಲ ಕಾರ್ಯಕ್ರಮವೇ 15 ವರ್ಷದಿಂದ ನಡೆಯದಿರುವ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿದ್ದು. ಸುಮಾರು 15 ಸಾವಿರ ಉಳಿಸಿದ ನಾವು ಕಾರ್ಯಯೋಜನೆ ಹಾಕಿಕೊಂಡು ಮಕ್ಕಳಿಗೆ I D ಕಾರ್ಡಿನ ವ್ಯವಸ್ಥೆ, ಡಯಾಸ್ ಇತರೇ ಸಣ್ಣಪುಟ್ಟ ಕಾಮಗಾರಿಗೆ ಬಳಸಿದೆವು. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಸದಸ್ಯರ ಮನೆಗಳಿಗೆ ಛಲಬಿಡದೆ ಭೇಟಿ ನೀಡಿದ್ದಕ್ಕೆ ಸಿಕ್ಕ ಪ್ರತಿಫಲವೇ ಮಕ್ಕಳಿಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ "ಬೋರ್ವೆಲ್". ಹಾಗೆಯೇ ಕುಳಿತುಕೊಳ್ಳಲು ಬೆಂಚುಗಳು ಹಾಳಾಗಿದ್ದುದನ್ನು ಮನಗಂಡು ಶ್ರೀಯುತ ಶ್ರೀನಿವಾಸ್ ಹೆಗಡೆ ನಿಸರಾಣಿ (ಎಂಜಿನಿಯರ್) ಇವರನ್ನು ಭೇಟಿ ಮಾಡಿ ವಿಷಯ ಅರುಹಲು

ಅವರು ಕೆಲಸ ನಿರ್ವಹಿಸುತ್ತಿರುವ B.E.L ಕಂಪನಿ ವತಿಯಿಂದ 5.50 ಲಕ್ಷ ಮೌಲ್ಯದ ಒಟ್ಟು 40 ಡೆಸ್ಕು ಮತ್ತು ಬೆಂಚ್, 8 ಬೀರು 5 ಟೇಬಲ್ 5 ಕುರ್ಚಿ ಒದಗಿಸಿ ಕೊಟ್ಟರು.

ಶಾಲೆಗೆ ಹಳೆ ವಿದ್ಯಾರ್ಥಿಗಳ ಸಹಾಯದಿಂದ ಒಂದು ಸುಂದರವಾದ ನಾಮಫಲಕವನ್ನು 12000 ರೂ ವೆಚ್ಚದಲ್ಲಿ ಮಾಡಿಸಲಾಯಿತು. ಶಿಥಿಲವಾದ ಧ್ವಜಕಟ್ಟೆ ತೆಗೆದು ಹೊಸ ಧ್ವಜಕಟ್ಟೆ ನಿರ್ಮಿಸಲಾಯಿತು. SATS ನಂತಹ ಮಕ್ಕಳ ಮಾಹಿತಿ ನಿರ್ವಹಣೆಗಾಗಿ ಒಂದು Laptop ಕೂಡ ದಾನಿಗಳಿಂದ ಸಂಗ್ರಹಿಸಲಾಯಿತು. ಆಕರ್ಷಕ ನಲಿಕಲಿ ಕೊಠಡಿ, H.M. ಕೊಠಡಿ ಅಲಂಕಾರ, ಜೊತೆಗೆ ವಿಶೇಷ ಗ್ರಂಥಾಲಯ ವ್ಯವಸ್ಥೆ ಕೂಡ ಮಾಡಲಾಗಿದ್ದು ಸದ್ಯದ ಪರಿಸ್ಥಿತಿಯಲ್ಲಿ ಶಾಲೆ ಹಿಂದಿಗಿಂತ ಭೌತಿಕವಾಗಿ ಹತ್ತುಪಟ್ಟು ಯಶಸ್ಸನ್ನು ಸಾಧಿಸಿದೆ ಎನ್ನಲು ಹರ್ಷಿಸುತ್ತೇವೆ

## ಕ್ರಿಯೆಗೆ ಪ್ರತಿಕ್ರಿಯೆ

ಯಾವುದೇ ಒಂದು ಕೆಲಸ ಆಗಬೇಕು ಎಂದಾಗ ಚಿಕ್ಕದಾದ ಏನಾದರೂ ಅನುಭವ ನಡೆದಿರಬೇಕು. ಆದರೆ ನಮಗೆ ಅಂತಹ ಏನೂ ಪ್ರೇರಣೆ ಆಗದಿದ್ದರೂ ಕೂಡ ಎಲ್ಲರ ಸಲಹೆ, ಸಹಾಯ, ಸಹಕಾರ ಪಡೆಯುವುದೇ ಒಂದು ಸಾಹಸ ಪ್ರಕ್ರಿಯೆ ಎನ್ನಬಹುದು. ಮುರಿದ ಬೆಂಚಿನ ಮೇಲಿಂದ ಮಕ್ಕಳು ಬಿದ್ದು ಪದೇ ಪದೇ ಗಾಯ ಮಾಡಿಕೊಂಡು ತೋರಿಸಲು ಬಂದಾಗ ನಾವೇನು ಮಾಡಲಾಗುತ್ತಿಲ್ಲ ಎಂದು ನಿಜಕ್ಕೂ ಮನಸ್ಸಿಗೆ ಬೇಸರ ಅನ್ನಿಸುತ್ತಿತ್ತು.. ಅದನ್ನೇ ಒಂದು ಅನುವಾಗಿಸಿಕೊಂಡು ದಾನಿಗಳಿಗೆಲ್ಲ ಒಂದೊಂದು Letter ಮಾಡಿ ಹಂಚಲು ಕ್ರಮಕ್ಕೈಗೊಂಡೆವು. ಅದರ ಫಲವೇ ಡೆಸ್ಕ ಮತ್ತು ಬೆಂಚುಗಳ ಅನಾವರಣ. ಹಾಗೆಯೇ ಬೇಸಿಗೆ ರಜಾ ಅವಧಿಯಲ್ಲಿ ಬಾವಿ ನೀರು ಬತ್ತಿದಾಗ ಪ್ರಕೃತಿಯೇ ನಮಗೆ ಯೋಜನೆ ಮಾಡಲು ಅವಕಾಶ ಮಾಡಿಕೊಟ್ಟಿತು. ಅದರಂತೆ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಮನವಿ ಸಲ್ಲಿಸಿದ್ದರ ಪರಿಣಾಮ ಬೋರ್ವೆಲ್ ಯೋಜನೆ ಕಾರ್ಯಗತವಾಯಿತು.

ಎಲ್ಲಾ ಕಾರ್ಯಗಳಿಗೂ ಶಿಕ್ಷಕರ ಸಹಭಾಗಿತ್ವ ಊರಿನವರ ಪ್ರೋತ್ಸಾಹಗಳೇ ಪ್ರಮುಖ ಅಂಶಗಳಾಗುತ್ತವೆ. ಜೊತೆಗೆ ಶಿಕ್ಷಣ ಇಲಾಖೆಯ ಅಧಿಕಾರಿ ವರ್ಗದ ಪ್ರೇರಣೆಯೂ ಸಹ ಸೇರುತ್ತದೆ. ಇವೆಲ್ಲವೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನ ಬಿಟ್ಟು ಇನ್ನೊಂದು ಇರಲಾರದು. ಇನ್ನೂ ಸಾಕಷ್ಟು ಸುಧಾರಣೆಯನ್ನ ನಮ್ಮ ಶಾಲೆ ರೂಪಿಸಿದೆ. ಅದಕ್ಕೆ ಸಾಧ್ಯವಾದಷ್ಟು ಪ್ರಯತ್ನವೂ ಅವಶ್ಯಕವಾಗಿದೆ ಅದನ್ನ ಮನಗಂಡು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕರ್ತವ್ಯನಿಷ್ಠೆ ಮೆರೆಯಲು ಕ್ರಿಯಾಯೋಜನೆ ರೂಪಿಸಿಕೊಂಡು ಮುಂದುವರೆಯಲು ಎಲ್ಲಾ ಶಿಕ್ಷಕರು ಕಠಿಬದ್ಧರಾಗಿದ್ದೇವೆ.

ಧನ್ಯವಾದಗಳು


ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ-ನಿಸರಾಣಿ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ನಿಸರಾಣಿ











